ಓ.ಎಸ್. ನಂಃ 15/2018 ಪಿ.ಡಬ್ಲ್ಯೂ (1)

**ದಿನಾಂಕಃ 03-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 1 ರವರ ಪರ ಶ್ರೀ ಎಸ್ ಎಮ್ ಎಸ್ ವಕೀಲರಿಂದಃ**

ನನ್ನ ತಂದೆಯ ಅವ್ವ ಅಪ್ಪ ಯಾವಾಗ ಮರಣ ಹೊಂದಿದರು ಗೊತ್ತಿಲ್ಲ. ಸದರಿ ದ್ಯಾಮಪ್ಪನಿಗೆ ಇಬ್ಬರು ಹೆಂಡತಿಯರು 1) ಬಸವ್ವ ಇನ್ನೊಬ್ಬಳ ಹೆಸರು ಗೊತ್ತಿಲ್ಲ. ಬಸವ್ವಳ ಮಗನೇ ಕರಿಯಪ್ಪ. ಇನ್ನೊಬ್ಬ ಹೆಂಡತಿಯ ದ್ಯಾಮಪ್ಪನಿಗೆ 2 ಮಕ್ಕಳು 1) ಕರಿಯಪ್ಪ 2) ಅಮರಪ್ಪ.

2. ನಾನು ಕೆರಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದೇನೆ. ಈಗಲೂ ಅಲ್ಲೆ ಇದ್ದೇನೆ. ನಾನು ಹುಟ್ಟಿ ಬುದಗುಂಪಾಕ್ಕೆ ನನ್ನ ತಾಯಿ ಹೋಗಿದ್ದಳು ನಂತರ ವಾಪಸ್ಸು ಬಂದಳು. ಅಷ್ಟೇ ಗೊತ್ತು. ಆಗಿನಿಂದ ಕೆರಳ್ಳಿಯಲ್ಲಿ ಇದ್ದಾಳೆ. ಪ್ರತಿವಾದಿ ನಂ. 1 ಕರಿಯಪ್ಪ ಕರೆದುಕೊಳ್ಳಲಿಲ್ಲಾ ಅದಕ್ಕಾಗಿ ಕೆರಳ್ಳಿಯಲ್ಲಿದ್ದಾಳೆ. ಯಾವ ಕಾರಣಕ್ಕೆ ಕರೆದುಕೊಳ್ಳಲಿಲ್ಲಾ ಗೊತ್ತಿಲ್ಲ. ಕೆರಳ್ಳಿ ನಾನು, ನನ್ನ ತಾಯಿ, ನನ್ನ ಗಂಡ ಇದ್ದೇವೆ. ನನ್ನ ತಾಯಿ ನನ್ನ ಹೆಣ್ಣಜ್ಜ ಮತ್ತು ಹೆಣ್ಣಜ್ಜಿ ಮನೆಯಲ್ಲಿದ್ದಳು. ನನ್ನ ತಂದೆ ಕರಿಯಪ್ಪ ನನ್ನ ತಾಯಿಯನ್ನು ಏಕೆ ಕರೆದುಕೊಳ್ಳಲಿಲ್ಲಾ ಅಂತಾ ಕೇಳಲು ನನ್ನ ಹೆಣ್ಣಜ್ಜಿ ಮತ್ತು ಹೆಣ್ಣಜ್ಜ ಹೋಗಿದ್ದರೋ ಇಲ್ಲವೂ ಗೊತ್ತಿಲ್ಲ,

3. ಕರಿಯಪ್ಪನಿಗೂ ಮತ್ತು ಪ್ರತಿವಾದಿ ನಂ. 3 ಬಸವ್ವಳಿಗೆ ಯಾವಾಗ ಮತ್ತು ಎಲ್ಲಿ ಮದುವೆಯಾಯಿತು ಗೊತ್ತಿಲ್ಲ. ಬಸಮ್ಮ ಯಾವ ಊರು ಮತ್ತು ಅವರ ಮನೆ ಎಲ್ಲಿ ಎನ್ನುವುದು ಗೊತ್ತಿಲ್ಲ ಎನ್ನುವುದು ಸರಿ. ಕರಿಯಪ್ಪ ಮತ್ತು ಬಸಮ್ಮಳಿಗೆ ಮಕ್ಕಳು ಇಲ್ಲ.

4. ದಾವಾ ಜಮೀನುಗಳ ಪೈಕಿ ಒಂದು ಬೂದುಗುಂಪಾ ಸೀಮಾ ಇನ್ನೇರೆಡು ಅಮಾರಪೂರ ಸೀಮಾದಲ್ಲಿ ಇವೆ. ನಾನು ಹೋಲ ನೋಡಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹೋದಗಲೆಲ್ಲಾ ಹೋಲಕ್ಕೆ ಹೋಗಿದ್ದೇನೆ. ಆದರೆ ಎಷ್ಟು ಸಾರಿ ಅಂತಾ ಹೇಳಲು ಆಗುವುದಿಲ್ಲ. ಕೇಸು ಹಾಕುವ ಪೂರ್ವ ನಮ್ಮ ತಂದೆಗೆ ಬೇಟ್ಟಿ ಆಗಲು ಹೋಗಿದ್ದೆ. ಹಣ ಕೊಡುವುದಿಲ್ಲ ಎಂದ ಅದಕ್ಕಾಗಿ ಈ ಕೇಸು ಹಾಕಿದೆ.

5. ನಾನು ಹೊಲಕ್ಕೆ ಹೋಗಿದ್ದೆ, ಹಣ ಕೇಳಿದ್ದೆ, ಅದಕ್ಕೆ ನನ್ನ ತಂದೆ ಇಲ್ಲ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಆರಾಮ ಇಲ್ಲದೆ ಇದ್ದಾಗ ಹೋಗಿಲ್ಲ ಮತ್ತು ಅವರು ನನಗೆ ಸೀರೆ ಉಡಿಸಿಲ್ಲ ಎಂದರೆ ಸರಿಯಲ್ಲ. ಆಗ ನನ್ನ ತಂದೆ ಹೊಲಗಳ ಸಾಗುವಳಿ ಮಾಡುತ್ತಿದ್ದ,

6. ಮರಿಯಪ್ಪ ನಮ್ಮ ಬೂದುಗುಂಪಾ ಹೊಲ ಖರೀದಿಸಿದ್ದಾನೆ ಅದಕ್ಕಾಗಿ ಆತನನ್ನು ಪಾರ್ಟಿ ಮಾಡಿದ್ದೇನೆ. ಆತ ಯಾವಾಗ ಖರೀದಿಸಿದ ಗೊತ್ತಿಲ್ಲ. ಈ ಕೇಸು ಹಾಕಲು ದಾಖಲಾತಿ ತೆಗೆಸಿದಾಗ ಗೊತ್ತಾಗಿದೆ. ಅಮರಪೂರ ಸಿಮಾ ಜಮೀನು ಅನಿತಾ ಡೊಳ್ಳಿನ ಖರೀದಿಸಿದ್ದಾರೆ ಅದಕ್ಕಾಗಿ ಅವರನ್ನು ಸಹ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ. ಅವರು ಖರೀದಿ ಮಾಡಿದ ದಿನಾಂಕ ಮಾಹಿತಿ ಇಲ್ಲ ಎಂದರೆ ಸರಿ.

7. ಬೂದುಗುಂಪಾದ ಕರಿಯಪ್ಪನ ಮನೆ ನೋಡಿದ್ದೇನೆ. ನಮ್ಮ ತಂದೆ ಕರಿಯಪ್ಪನ ಮನೆ ಉತ್ತರಕ್ಕೆ ಇದೆ ಚಕ್ಕಬಂದಿ ಹೇಳಲು ಬರುವುದಿಲ್ಲ. ಈಗ ಆ ಮನೆಯಲ್ಲಿ ಯಾರು ಇದ್ದಾರೆ ಗೊತ್ತಿಲ್ಲ, ನನಗೆ ಆರಾಮ ಇರಲಿಲ್ಲ ಅದಕ್ಕಾಗಿ ದುಡ್ಡು ಕೇಳಿದ್ದೆ. ಎಷ್ಟು ಇದ್ದಷ್ಟು ಕೊಡಿ ಎಂದೆ ಕೊಡಲಿಲ್ಲ. ದುಡ್ಡು ಕೇಳಲು ನಾನು ಒಬ್ಬಳೇ ಹೋಗಿದ್ದೆ.

8. ನಾನು ಮತ್ತು ನನ್ನ ತಾಯಿ ಕೂಡಿ ಹೋಗಿಲ್ಲ ನಾನು ಒಬ್ಬಳೇ ಹೋಗಿದ್ದೇನೆ. ಹೊಲಕ್ಕೂ ಸಹ ನನ್ನ ತಾಯಿಯನ್ನು ಕರೆದೊಯ್ದುದಿಲ್ಲ ನಾನು ಒಬ್ಬಳೇ ಹೋಗಿದ್ದೇನೆ. ನಾನು ಹೊಲಕ್ಕೆ ಹೋಗಿ ಬಂದು ಮಾಡಿದ್ದೇನೆ ಹೀಗಾಗಿ ಹೊಲಗಳು ಗೊತ್ತಿವೆ. ನಾನು ಹೋಗಿ ಬಂದು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಕೇಸು ಹಾಕುವ ಪೂರ್ವ ದುಡ್ಡು ಬಿಟ್ಟು ಬೇರೆ ಏನು ಕೇಳಿಲ್ಲ ಎಂದರೆ ಸರಿ. 2018 ರಲ್ಲೆ ಅಲ್ಲಿ ಹೋದಾಗ ನನ್ನ ತಂದೆ ದುಡ್ಡು ಕೊಡುವುದಿಲ್ಲ ಅಂದ. ಆಗ ಪೆಬ್ರುವರಿ ತಿಂಗಳು ಇತ್ತು ದಿನಾಂಕ ನೆನಪಿಲ್ಲ. ಮತ್ತೆ ಈ ಜಮೀನು ಮಾರಾಟ ಮಾಡಿದ ವಿಷಯ ಗೊತ್ತಿಲ್ಲ.

10. ಹನಮೇಶ ನಿಂಗಪ್ಪ ಕುದರಿಮೋತಿ ಸಾಃ ಬೂದುಗುಂಪಾ ಇವರನ್ನು ಕರಿಯಪ್ಪ ಮತ್ತು ಬಸವ್ವ ದತ್ತಕ ಪಡೆದಿದ್ದಾರೆ ಎಂದರೆ ಸರಿಯಲ್ಲ. 10 ವರ್ಷಗಳಿಂದ ಈ ಜಮೀನು ಮತ್ತು ಬಸವ್ವ ಮತ್ತು ಕರಿಯಪ್ಪರನ್ನು ಈ ಹನಮೇಶ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆಸ್ತಿಯನ್ನು ಕೊಡುವುದರಿಂದ ತಪ್ಪಿಸಿಕೊಳ್ಳು ಈ ಕಥೆ ಸೃಷ್ಟಿ ಮಾಡುತ್ತಿದ್ದಾರೆ.

11. ಬೂದುಗುಂಪಾದಲ್ಲಿ ಒಂದೊಂದು ದಿನ ಇದ್ದು ಬಂದಿದ್ದೇನೆ. ಕರಿಯಪ್ಪ ಮತ್ತು ಬಸವ್ವ ಅಡವಿ ಅಮರೇಶ್ವರ ದೇವಸ್ಥಾನದ ಹತ್ತಿರ ಎಷ್ಟು ದಿನದಿಂದ ಇದ್ದಾರೆ ಗೊತ್ತಿಲ್ಲ. ಅಲ್ಲೆ ಕ್ಯಾಂಪ್ ಏರಿಯಾದಲ್ಲಿದ್ದಾರೆ. ನಾನು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಹನಮೇಶ ಎಂಬವವನ್ನು ಅಲ್ಲಿ ಇಲ್ಲ. ಈಗ ಕರಿಯಪ್ಪನ ವಯಸ್ಸು 60 ಇರಬಹುದು. ಆದರೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಬಸವ್ವಳ ವಯಸ್ಸು ಗೊತ್ತಿಲ್ಲ.

12. ಕರಿಯಪ್ಪನ ಮಗಳು ಎಂದು ತೋರಿಸಲು ಶಾಲಾ ದಾಖಲಾತಿ ಹಾಜರುಪಡಿಸಿದ್ದೇನೆ, ನಾನು 4 ನೇ ಕ್ಲಾಸ್ ಓದಿದ್ದೇನೆ. ನಿಪಿ 49 ಶಾಲಾ ದೃಡಿಕರಣ ಪತ್ರ ಸೃಷ್ಟಿ ಮಾಡಿ ಹಾಕಿದೆ ಎಂದರೆ ಸರಿಯಲ್ಲ. ನಾನು 8 ನೇ ವಯಸ್ಸಿನವಳಿದ್ದಾಗ ನನ್ನ ಮದುವೆಯಾಗಿದೆ, ಆ ಕಾರಣದಿಂದ ಆಧಾರ ಕಾರ್ಡ, ರೇಷನ್ ಕಾರ್ಡ ಮತ್ತು ವೂಟರ್ ಕಾರ್ಡನಲ್ಲಿ ನನ್ನ ಗಂಡನ ಹೆಸರು ದಾಖಲಾಗಿದೆ, ನನ್ನ ತಂದೆ ಹೆಸರು ಇಲ್ಲ. ಶಾಲಾ ದಾಖಲಾತಿ ಬಿಟ್ಟು ಕರಿಯಪ್ಪನ ಮಗಳು ಎಂದು ತೋರಿಸಲು ನನ್ನದು ಬೇರೆ ದಾಖಲೆ ಇಲ್ಲ ಎಂದರೆ ಸರಿ. ನಿಪಿ 49 ಶಾಲಾ ದಾಖಲಾತಿ ಸೃಷ್ಟಿ ಮಾಡಿ ಹಾಕಿದೆ ಎಂದರೆ ಸರಿಯಲ್ಲ.

13. ಕರಿಯಪ್ಪನ ಆಸ್ತಿಗಳು ನನಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆಸ್ತಿ ಯಾರು ಖರೀದಿಸಿದ್ದಾರೆ ಅಂತಾ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 4 ಮತ್ತು 5 ಆಸ್ತಿ ಖರೀದಿ ಮಾಡಿದ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಹೊಲಗಳ ಚಕ್ಕಬಂದಿ ಹೇಳಲು ಬರುವುದಿಲ್ಲ. ನಾನು ಈ ಆಸ್ತಿಗಳನ್ನು ನೋಡಿಲ್ಲ ಎಂದರ ಸರಿಯಲ್ಲ. ಸುಲಭವಾಗಿ ಮತ್ತು ಸರಳವಾಗಿ ಹಣ ಮತ್ತು ಆಸ್ತಿ ಗಳಿಸಲು ಸುಳ್ಳು ದಾವೆ ಹಾಕಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**